## ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾಸನ

**ಸ್ಪೆಷಲ್ ಕೇಸ್ ನಂಃ 78/2018**

| | | |
|---|---|---|
| | ಚಾಸಾಃ 13 | ಪ್ರಾಸಾಃ 5 |
| ಹೆಸರು | ಶಾಂತಮಲ್ಲೇಗೌಡ | |
| ತಂದೆಯ ಹೆಸರು : | ಮಲ್ಲಪ್ಪಗೌಡ | |
| ವಯಸ್ಸು: | 68 ವರ್ಷ | |
| ಕೆಲಸಃ | ವ್ಯವಸಾಯ | |
| ವಾಸಸ್ಥಳ | ಮೇರ್ವೆ ಗ್ರಾಮ | |

**ದಿನಾಂಕಃ 01.06.2024. ರಂದು ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಮಾನ್ಯ ಎಸ್‌ಪಿಪಿ ರವರಿಂದ**

ಚಾಸಾ-2 ಮತ್ತು 12 ರವರು ಗೊತ್ತು. ಸಾಕ್ಷಿ ನಿಪಿ-2 ಮತ್ತು 3 ರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2 (ಡಿ) ಮತ್ತು 3(ಸಿ) ಎಂದು ಗುರುತಿಸಲಾಗಿದೆ. ಸುಮಾರು 2 ವರ್ಷಗಳ ಹಿಂದೆ ಗಲಾಟೆಯ ವಿಚಾರವಾಗಿ ನಾನು ಮೇರ್ವೆ ಮತ್ತು ಎಡವನಹಳ್ಳಿ ರಸ್ತೆಯಲ್ಲಿ ಆಲದ ಮರ ಪಕ್ಕದಲ್ಲಿ ನಿಪಿ-2 ಮತ್ತು 3 ಕ್ಕೆ ಸಹಿ ಮಾಡಿರುತ್ತೇನೆ. ಊರಿನ ಜನರು ನನ್ನನ್ನು ಬರಲು ಹೇಳಿರುತ್ತಾರೆ. ಊರಿನ ಜನರು ಅಲ್ಲದೇ, ಚಂದ್ರಶೇಖರ್ ಇದ್ದರು. ಪೊಲೀಸರು ಮಹಜರ್ ಮಾಡಿರುತ್ತಾರೆ. ಪೊಲೀಸರು ತಿಮ್ಮಯ್ಯನವರ ಮಗಳಿಗೆ ಮಾನಭಂಗ ಮಾಡಿರುವ ವಿಚಾರವಾಗಿ ಮಹಜರ್ ಮಾಡಿರುತ್ತಾರೆ.

2. ಮಹಜರ್ ಸಮಯದಲ್ಲಿ ಒಂದು ಕೆಂಪು ಸ್ವೆಟರನ್ನು ಹಾಗೂ ಕೆಂಪು ಅವಾಯಿ ಚಪ್ಪಲನ್ನು ಅಮಾನತು ಪಡಿಸಿಕೊಂಡಿರುತ್ತಾರೆ. ರಸ್ತೆಯ ಪಕ್ಕದಲ್ಲಿ ಒಂದು ಬೈಕು ನಿಂತಿದ್ದು ಅದೇ ಬೈಕು ಎಂದು ಅದನ್ನು ಅಮಾನತು ಪಡಿಸಿಕೊಂಡಿರುತ್ತಾರೆ. ಸಾಕ್ಷಿ ಮುಮಾ-1 ಮತ್ತು 2 ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಮುಮಾ-3 ನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ಆರೋಪಿ ಪರ ವಕೀಲರು ಗೈರು ಹಾಜರು. ಯಾವುದೇ ಮನವಿ ಪ್ರಾರ್ಥನೆ ಇಲ್ಲ. ಆರೋಪಿ ಈ ಸಾಕ್ಷಿಗೆ ಪ್ರಶ್ನೆ ಕೇಳಿರುತ್ತಾರೆ.

ಮಹಜರ್ ಸಮಯದಲ್ಲಿ ನಾನು ಆರೋಪಿಯನ್ನು ನೋಡಿರುವುದಿಲ್ಲ.

(ನನ್ನ ಉಕ್ತಲೇಖನಕಲ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಪ್ರ.,

ಅಪರ ಸೆಷನ್ಸ್ ಮತ್ತು ವಿಶೇಷ
ನ್ಯಾಯಾಧೀಶರು, ಹಾಸನ